# 28

# ಯೇಸುವಿನ ಅಧಿಕಾರಕ್ಕೆ ಶರತ್ತು

# (12:22-37)

ಸಂಕ್ಷಿಪ್ತ ವಿರಾಮದ ನಂತರ (12:15-21), ಮತ್ತಾಯನು ಯೇಸು ಮತ್ತು ಫರಿಸಾಯರ ಮಧ್ಯದಲ್ಲಿರುವ ಘರ್ಷಣೆಯನ್ನು ವರ್ಣಿಸುವದಕ್ಕೆ ಹಿಂತಿರುಗುತ್ತಾನೆ. ಈ ಅಧ್ಯಾಯದಲ್ಲಿ ಬರುವ ಎರಡು ಗುಂಪುಗಳ ಮಧ್ಯದಲ್ಲಿರುವ ಹಿಂದಿನ ಜಗಳ ಸಬ್ಬತ್‌ದಿನದ ವಿಷಯವನ್ನು ಒಳಗೊಂಡಿತು (12:1-14). ಈ ವಿಷಯದಲ್ಲಿ, ಯೇಸು ಯಾವ ಅಧಿಕಾರದ ಮೇಲೆ ಅದ್ಭುತ ಗಳನ್ನು ಮಾಡುತ್ತಾನೆ ಎಂಬುದು ಪ್ರಾಮುಖ್ಯವಾದ ವಿಷಯವಾಗಿತ್ತು (12:22-37).

## ಫರಿಸಾಯರ ಸುಳ್ಳು ಆಕ್ಷೇಪಣೆ (12:22-24)

**22ದೆವ್ವ ಹಿಡಿದು ಕುರುಡನೂ ಮೂಕನೂ ಆಗಿರುವ ಒಬ್ಬನನ್ನು ಆತನ ಬಳಿಗೆ ಕರತಂದರು; ಆತನು ಅವನನ್ನು ಸ್ವಸ್ಥಮಾಡಲು ಆ ಮೂಕನಿಗೆ ಬಾಯಿ ಕಣ್ಣು ಎರಡೂ ಬಂದವು. 23ಅದಕ್ಕೆ ಜನರೆಲ್ಲರೂ ಬೆರಗಾಗಿ - ಈತನು ದಾವೀದಕುಮಾರನೇನು ಎಂದು ಮಾತಾಡುತ್ತಿದ್ದರು. 24ಆದರೆ ಫರಿಸಾಯರು ಅದನ್ನು ಕೇಳಿ - ಇವನು ದೆವ್ವಗಳ ಒಡೆಯನಾದ ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೇ ಹೊರತು ಬೇರೆ ರೀತಿಯಿಂದ ಬಿಡಿಸುವದಿಲ್ಲ ಅಂದರು.**

**ವಚನ 22. ದೆವ್ವ ಹಿಡಿದಿರುವ ಮನುಷ್ಯನು,** ಅವನಿಗೆ ಕಣ್ಣು ಕಾಣಿಸುವದಿಲ್ಲ ಇಲ್ಲವೇ ಕಿವಿ ಕೇಳಿಸುವದಿಲ್ಲ, ಆತನನ್ನು **ಯೇಸುವಿನ ಬಳಿಗೆ ತೆಗೆದುಕೊಂಡು** ಬಂದರು. ಕುರುಡನೂ ಮೂಗನೂ ಆಗಿರುವ ಮನುಷ್ಯನ ಸ್ಥಿತಿಯು ದೆವ್ವಹಿಡಿದಿರುವ ಪರಿಣಾಮದಿಂದಾಗಿತ್ತೆಂದು ಎಂದು ತಿಳಿದುಕೊಳಲ್ಪಟ್ಟಿತು (9:32ರ ಮೇಲಿನ ವ್ಯಾಖ್ಯಾನ ನೋಡಿರಿ). ದೆವ್ವವನ್ನು ಬಿಡಿಸುವ ಮೂಲಕ, ಯೇಸು ಮನುಷ್ಯನನ್ನು **ಸ್ವಸ್ಥಮಾಡಲು,** ಆ ಮೂಕನಿಗೆ ದೃಷ್ಟಿ ಮತ್ತು ಮಾತುಗಳು ತಿರುಗಿ ಬಂದವು.

**ವಚನ 23.** ಸೇರಿಬಂದ ಜನರು **ಬೆರಗಾಗಿ** (*existēmi*), ಅಥವಾ ಅದ್ಭುತವನ್ನು ನೋಡಿ "ಸಂಪೂರ್ಣವಾಗಿ ಆಶ್ಚರ್ಯಚಕಿತರಾದರು." ಆ ಗುಂಪಿನಲ್ಲಿ ಅನೇಕರು ಯೇಸು ಇತರ ಅದ್ಭುತಗಳನ್ನು ಮಾಡುವದನ್ನು ನೋಡಿರಬಹುದು, ಇದು ಸಹ ಅವರನ್ನು ವಿಸ್ಮಯದಿಂದ ತುಂಬಿತು.

ಜನರು ಯೇಸುವಿನ ಅದ್ಭುತದಿಂದ ಹೃದಯ ತುಂಬಿದವರಾಗಿರುವಾಗ, ಯೇಸು ಯಾರು ಎಂಬುದು ಅವರಿಗೆ ಖಚಿತವಾಗಿರಲಿಲ್ಲ (ನೋಡಿರಿ ಯೋಹಾನ 7:12, 40-43; 10:19-21). ಆತನ ಅದ್ಭುತದ ಹಿಂದಿರುವ ಶಕ್ತಿ ಆತನು ವಾಗ್ದಾತ್ತ ಮೆಸ್ಸೀಯನು ಎಂಬ ಸೂಚನೆಯನ್ನು ನೀಡಿತು. ಏನೇ ಆದರೂ, ಯೇಸುವನ್ನು ದೃಷ್ಟಿಸಿದಾಗ, ಸಂಚಾರಿ ಉಪದೇಶಕನಾಗಿರುವ ಬಡ ಬಡಗಿಯ ಮಗನಾದ ಈತನು ನಿಜವಾಗಿ ದೇವರು ವಾಗ್ದಾನ ಮಾಡಿದಾತನಾಗಿದ್ದಾನೋ ಎಂದು ಅವರು ಪ್ರಶ್ನಿಸಿದರು. ಜನಸಮೂಹದ ಅನಿಶ್ಚತತೆ ಫರಿಸಾಯರ ಉಪಸ್ಥಿತಿಯ ಪ್ರಭಾವವನ್ನು ಹೊಂದಿರಬಹುದು (ನೋಡಿರಿ ಯೋಹಾನ 7:13; 9:22; 19:38).

**ದಾವೀದನ ಮಗನು** ಎಂಬ ಪದಗುಚ್ಛ ಮೆಸ್ಸೀಯನು ಎಂಬ ಬಿರುದು, ಹಳೆ

ಒಡಂಬಡಿಕೆಯ ಮೂಲದಿಂದ ಬಂದಿದೆ (2 ಸಮುವೇಲ 7:12-16; ಕೀರ್ತನೆ 89:3, 4; ಯೆಶಾಯ 9:6, 7; ಯೆರೆಮಿಯ 23:5) ಮತ್ತು ಮತ್ತಾಯ ಸುವಾರ್ತೆಯಲ್ಲಿ ಅನೇಕ ಸಾರಿ ಕಾಣಿಸುತ್ತದೆ (1:1ರ ಮೇಲಿನ ವ್ಯಾಖ್ಯಾನ ನೋಡಿರಿ).[1]

**ವಚನ 24.** ಜನರು ರಕ್ಷಕನನ್ನು ಮೆಚ್ಚಿಕೊಳ್ಳುವದನ್ನು ನೋಡಿ **ಫರಿಸಾಯರು** ಕಳವಳಪಟ್ಟರು. ಯೇಸು ದೆವ್ವಗಳನ್ನು ದೇವರ ಬಲಕ್ಕಿಂತ ಹೆಚ್ಚಾಗಿ **ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೇ** ದೇವರ ಬಲದಿಂದ ಅಲ್ಲ ಎಂದು ಹೇಳಲು ಅವರ ಕಳವಳ ಅವರನ್ನು ಪ್ರೇರೇಪಿಸಿತು (9:33, 34; 10:25ರ ಮೇಲಿನ ವ್ಯಾಖ್ಯಾನ ನೋಡಿರಿ). ಯೆಹೂದ್ಯರು ಸೈತಾನನನ್ನು "ಬೆಲ್ಜೆಬೂಲ" ಎಂದು ಉಲ್ಲೇಖಿಸುವ ಒಂದು ಹೆಸರಾಗಿತ್ತು, ಮತ್ತು ಇಲ್ಲಿ ಅವರು ಸ್ಪಷ್ಟವಾಗಿ ಅದನ್ನೇ ಉದ್ದೇಶಿಸಿದ್ದಾರೆ. ಫರಿಸಾಯರು ಅದ್ಭುಗಳನ್ನು ತಾವೇ ಸ್ವಂತ ಅಲ್ಲಗಳೆಯಲು ಆಗದೇ ಹೋದಾಗ ಅವರು ಅದರ ಮೂಲಕ್ಕೆ ಅಗೌರವವನ್ನು ತರುವ ಪ್ರಯತ್ನ ಮಾಡಿದರು.[2] ಕ್ರಿಸ್ತನ ಗೌರವವನ್ನು ಮತ್ತು ಆತನ ಜನಪ್ರಿಯತೆಯನ್ನು ನಾಶಮಾಡುವದು ಅವರ ಗುರಿಯಾಗಿತ್ತು.

## ಯೇಸು ತನ್ನ ಅಧಿಕಾರವನ್ನು ಸಮರ್ಥಿಸಿಕೊಂಡನು (12:25-30)

**25ಆತನು ಅವರ ಆಲೋಚನೆಗಳನ್ನು ತಿಳುಕೊಂಡು ಅವರಿಗೆ ಹೇಳಿದ್ದೇನೆಂದರೆ - ಯಾವ ರಾಜ್ಯವಾದರೂ ತನ್ನಲ್ಲಿ ಭೇದ ಹುಟ್ಟಿದರೆ ಹಾಳಾಗುವದು; ತನ್ನಲ್ಲಿ ಭೇದ ಹುಟ್ಟಿದ ಯಾವ ಪಟ್ಟಣವಾದರೂ ಮನೆಯಾದರೂ ನಿಲ್ಲದು. 26ಅದರಂತೆ ಸೈತಾನನು ಸೈತಾನನನ್ನು ಹೊರಡಿಸಿದರೆ ತನ್ನಲ್ಲಿ ಭೇದ ಹುಟ್ಟಿಸಿಕೊಂಡ ಹಾಗಾಯಿತು. 27ಹಾಗಾದರೆ ಅವನ ರಾಜ್ಯವು ಹೇಗೆ ಉಳಿದೀತು? ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ಅದದರಿಂದ ಅವರೇ ನಿಮಗೆ ನ್ಯಾಯ ತೀರಿಸುವವರಾಗುವರು. 28ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ ಬಂತಲ್ಲಾ. 29ಇದಲ್ಲದೆ ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದು ಹೇಗೆ? ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು. 30ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದುರಿಸುವವನಾಗುತ್ತಾನೆ.**

**ವಚನ 25.** ಯೇಸು ಬೆಲ್ಜೆಬೂಲನ ಬಲದಿಂದ ದೆವ್ವಗಳ ಬಿಡಿಸುತ್ತಾನೆಂದು ಫರಿಸಾಯರ ಆಪಾದನೆಯಾಗಿತ್ತು (12:24) - ಅವರು ನೇರವಾಗಿ ಅದನ್ನು ಯೇಸುವಿಗೆ ಹೇಳಲಿಲ್ಲ. ಜನಸಮೂಹವು ಆಲಿಸಲಿ ಎಂದು ಹೇಳಿರಬಹುದು. **ಯೇಸು** ಅವರ ಮಾತುಗಳನ್ನು ಆಲಿಸಲಿಲ್ಲ, ಆದರೆ ಅವರ **ಆಲೋಚನೆಗಳನ್ನು** ಯೇಸು ಗ್ರಹಿಸಬಲ್ಲನು (ನೋಡಿರಿ 9:4; ಯೋಹಾನ 2:24, 25).

ಆತನ ಪ್ರಾರಂಭದ ಪ್ರತ್ಯುತ್ತರದಲ್ಲಿ, ಯೇಸು ಫರಿಸಾಯರು ಮಾಡಿದ ಆರೋಪ ಅಸಂಬದ್ಧವಾಗಿದೆ ಎಂಬುದನ್ನು ಸೂಚಿಸಿದನು. ಆತನು ತನ್ನ ವಿಷಯವನ್ನು ಸ್ಥಾಪಿಸಲು **ಯಾವ ರಾಜ್ಯವಾದರೂ, ಯಾವ ಪಟ್ಟಣವಾದರೂ, ಮನೆಯಾದರೂ** ಈ ಮೂರು ಸಾಮ್ಯಗಳನ್ನು ಉಪಯೋಗಿಸಿದ್ದಾನೆ. ಈ ಎಲ್ಲಾ ಹೋಲಿಕೆಗಳು ಜನರನ್ನು ಸೂಚಿಸುತ್ತವೆ: ಒಂದು ರಾಜ್ಯದ ನಾಗರೀಕರು, ಒಂದು ಪಟ್ಟಣದ ನಿವಾಸಿಗಳಾಗಿರುತ್ತಾರೆ, ಮತ್ತು ಕುಟುಂಬದ ಸದಸ್ಯರಾಗಿರುತ್ತಾರೆ. ಇವುಗಳಲ್ಲಿ ಯಾವುದಾದರು ಒಂದು ತನ್ನಲ್ಲಿಯೇ **ವಿರೋಧವುಂಟಾದರೆ ಅಂಥವುಗಳು ನಿಂತುಕೊಳ್ಳುವದಿಲ್ಲ.** Craig S. Keener ರವರು ಆಲೋಚಿಸಿ ಈ ಭಾಷಾ ಶೈಲಿಯು ನಾಣ್ಣುಡಿಯಂತೆ ಇರಬಹುದು ಎಂದು ಹೇಳಿದ್ದಾರೆ.[3]

ಎಲ್ಲರಿಗೂ ಚಿರಪರಿಚಯವಾಗಿರುವ ಅಂಶವೇನೆಂದರೆ ಅಂತರಾಳದ ಕಲಹ ಅದು ನಾಶನಕ್ಕೆ ನಡಿಸುತ್ತದೆ, ಮತ್ತು ಯೇಸುವಿನ ಶೋತ್ರುಗಳು ಈ ಸತ್ಯ ಸಂಗತಿಯನ್ನು ನೋವಿನಿಂದ ಅರಿತಿದ್ದರು. ಸೊಲೊಮೋನನು ಆಳಿದ ತರುವಾಯ ಪ್ರಾಚೀನ ಕಾಲದ ಇಸ್ರಾಯೇಲ್ ರಾಜ್ಯವು ವಿಭಾಗವಾಯಿತು (1 ಅರಸುಗಳು 12:1-24), ಅಂತ್ಯದಲ್ಲಿ ರಾಜ್ಯವು ಎರಡು ಭಾಗವಾಗಿ ಅಸ್ಸಿರಿಯಾ ಮತ್ತು ಬಾಬೇಲ್‌ಗೆ ಸೆರೆಯಾಗಿ ತೆಗೆದುಕೊಳ್ಳಲ್ಪಟ್ಟವು (2 ಅರಸುಗಳು 18:9-12; 25:1-21).

**ವಚನ 26.** ಸತ್ಯವನ್ನು ವಿವರಿಸಿದ ತರುವಾಯ, ಯೇಸು ಹತ್ತಿರದಲ್ಲಿಯೇ ಇರುವ ಸಂಗತಿಗೆ ಅಳವಡಿಸಿದನು: **ಸೈತಾನನು ಸೈತಾನನ್ನು ಹೊರಡಿಸಿದರೆ ತನ್ನಲ್ಲಿ ಬೇದ ಹುಟ್ಟಿಸಿಕೊಂಡ ಹಾಗಾಯಿತು; ಹಾಗಾದರೆ ಅವನ ರಾಜ್ಯವು ಹೇಗೆ ಉಳಿದಿತು?** ಇದು ಸ್ಪಷ್ಟ ವಾಗಿ ಸೈತಾನನಿಗೆ ಪ್ರಜ್ಞೆ ಇಲ್ಲದವನು ಎಂದು ಹೇಳುತ್ತದೆ, ಅವನು ಯುಕ್ತಿಯುಳ್ಳವನು ಮತ್ತು ಚುರುಕು ಬುದ್ದಿಯವನಾಗಿದ್ದು (ಆದಿಕಾಂಡ 3:1; 1 ಪೇತ್ರ 5:8), ತನ್ನನ್ನು ತಾನೇ ವಿರೋಧ ಪಡಿಸಿಕೊಳ್ಳುತ್ತಾನೆ. ಜನರಿಗೆ ಹಿಂಸೆ ಕೊಡಲು ಕಳುಹಿಸಲ್ಪಟ್ಟ ಈ ದೆವ್ವಗಳನ್ನು ಇವನೇ ಯಾಕೆ ಓಡಿಸುತ್ತಾನೆ ಮತ್ತು ಇದರಿಂದ ಯಾಕೆ ಸೋಲನ್ನು ಉಂಟುಮಾಡಿಕೊಳ್ಳುತ್ತಾನೆ?

ಯೇಸುವಿನ ಪ್ರಶ್ನೆ ಸೈತಾನನಿಗೂ ಸಹ "ರಾಜ್ಯ" ವಿದೆ ಎಂಬುದನ್ನು ಪ್ರಕಟಿಸುತ್ತದೆ. ಇದನ್ನು ಪೌಲನು "ಸೈತಾನನ ರಾಜ್ಯ" (ಅಪೊಸ್ತಲರ ಕೃತ್ಯಗಳು 26:18) ಮತ್ತು "ಕತ್ತಲೆಯ ರಾಜ್ಯ" (ಕೊಲಸ್ಸೆ 1:13) ಎಂದು ವರ್ಣಿಸುತ್ತಾನೆ. ಕ್ರೈಸ್ತರ ಆತ್ಮೀಕ ಹೋರಾಟ ಸೈತಾನನ ರಾಜ್ಯದ ವಿರುದ್ಧವಾಗಿದೆ - "ರಾಜ್ಯತ್ವಗಳ," "ಅಧಿಕಾರಿಗಳ," "ಅಂಧಕಾರದ ಲೋಕಾಧಿ ಪತಿಗಳ ಮೇಲೆ" ಮತ್ತು "ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" (ಎಫೆಸ 6:12).

**ವಚನ 27.** ಕ್ರಿಸ್ತನು ಫರಿಸಾಯರ ನ್ಯಾಯತೀರ್ಪು ಅಸಂಬದ್ಧತೆಯಿಂದ ಕೂಡಿದೆ ಎಂಬುದನ್ನು ಪ್ರದರ್ಶಿಸುವದನ್ನು ಮುಂದುವರೆಸಿದನು. ಆತನು **ದೆವ್ವಗಳನ್ನು ಬೆಲ್ಜೆಬೂಲನ** ಬಿಡಿಸುತ್ತಾನೆಂದು ಅವರು ಆರೋಪಿಸಿದ್ದರು. ಅದಕ್ಕೆ ಉತ್ತರವಾಗಿ ಯೇಸು, **ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ?** ಎಂದು ಕೇಳಿದನು. "ಮಕ್ಕಳು" ಎಂದರೆ ದೆವ್ವಗಳನ್ನು ಬಿಡಿಸುವ ಬಲ ನಮಗಿದೆ ಎಂದು ಹೇಳಿಕೊಳ್ಳುವ ಫರಿಸಾಯರ ಕೆಲವು ಶಿಷ್ಯರು ಅಥವಾ ಹಿಂಬಾಲಕರು.[4] ದೆವ್ವದ ಮಂಡಲಿಯಲ್ಲಿರುವವರು ಅದೇ ಕಾರ್ಯವನ್ನು ತಾವು ಮಾಡಲು ಶಕ್ತರಾಗಿದ್ದೇವೆ ಎಂದು ಹೇಳುವಾಗ ಯೇಸು ಅವರನ್ನು ಏಕೆ ಆಕ್ಷೇಪಿಸುತ್ತಾನೆ? ಸೈತಾನ ಬಲದಿಂದ ದೆವ್ವಗಳನ್ನು ಬಿಡಿಸುವಾಗ ಫರಿಸಾಯರು ಈ ಶಿಷ್ಯರನ್ನು ಆಕ್ಷೇಪಿಸುವದಿಲ್ಲ. ಹಾಗಿದ್ದಲ್ಲಿ ಯೇಸುವನ್ನು ಏಕೆ? **ಅವರೇ ನಿಮಗೆ ನ್ಯಾಯತೀರಿಸುವವರಾಗುವರು** ಎಂದು ಹೇಳುವದಕ್ಕೆ ಕಾರಣ ಫರಿಸಾಯರು ಅದೇ ಅಳತೆಯಿಂದಲೇ ತಮ್ಮ ಶಿಷ್ಯರು ದೆವ್ವಗಳನ್ನು ಬಿಡಿಸುವದನ್ನು ದೃಢೀಕರಿಸಿದರು ನಿಷ್ಪಕ್ಷಪಾತವಾಗಿರಬೇಕಾದಲ್ಲಿ, ಅವರು ಯೇಸುವನ್ನು ಸಹ ದೃಢೀಕರಿಸಬೇಕಾಗಿತ್ತು.

**ವಚನ 28.** ತರ್ಕಬದ್ಧವಾಗಿ, ಯೇಸುವಿನ ವೈರಿಗಳು ಯೆಹೂದ್ಯ ಭೂತೋಚ್ಚಾಟಕರು ಮೋಸಗಾರರು ಎಂದು ಒಪ್ಪಿಕೊಳ್ಳಬೇಕಾಗಿತ್ತು ಇಲ್ಲವೇ ಯೇಸು **ದೆವ್ವಗಳನ್ನು ಬಿಡಿಸಿದ್ದು** ದೇವರ ಬಲದ ಅದೇ ಅಧಿಕಾರ ಮೂಲಕ ಎಂದು ಒಪ್ಪಿಕೊಳ್ಳಬೇಕಾಗಿತ್ತು. ಯೇಸು ಅವರಿಗೆ ಆತನು ನಿಜವಾಗಿ, **ದೇವರಾತ್ಮನ ಬಲವನ್ನು** ಉಪಯೋಗಿಸುತ್ತಿದ್ದಲ್ಲಿ, **ದೇವರ ರಾಜ್ಯ** ಅವರ ಮಧ್ಯದಲ್ಲಿ ಇದೆ ಎಂಬುದನ್ನು ಅವರು ಗುರುತಿಸಬೇಕಾಗಿತ್ತು ಎಂಬುದನ್ನು ಎತ್ತಿತೋರಿಸುತ್ತಾನೆ. "ದೇವರಾತ್ಮನು" ಎನ್ನುವ ಬದಲಾಗಿ ಲೂಕನು "ದೇವರ ಬಲದಿಂದಲೇ" ಎಂದು ಬರೆದಿದ್ದಾನೆ (ಲೂಕ 11:20; ನೋಡಿರಿ ವಿಮೋಚನಕಾಂಡ 8:19; 31:18; ಕೀರ್ತನೆ 8:3).

ಮತ್ತಾಯನ ಸುವಾರ್ತೆಯಲ್ಲಿ "ದೇವರ ರಾಜ್ಯ" ಎನ್ನುವ ಪದಗುಚ್ಛವು ಕೇವಲ ನಾಲ್ಕು ಸಾರಿ ಕಾಣಿಸುತ್ತದೆ (12:28; 19:24; 21:31, 43). ಮತ್ತಾಯನ ಅಚ್ಚುಮೆಚ್ಚಿನ

ಪದ "ಪರಲೋಕ ರಾಜ್ಯ." ಒಂದೇ ಸಂಸ್ಥೆಗೆ ಭಿನ್ನವಾದ ಎರಡು ಬಿರುದುಗಳು. ರಾಜ್ಯವು ಪರಲೋಕದಲ್ಲಿ ಉತ್ಪತ್ತಿಯಾಗುತ್ತದೆ ಮತ್ತು ದೇವರದಾಗಿದೆ. ಇದು ಪರಲೋಕದ ಸಿಂಹಾಸನದಲ್ಲಿ ಕುಳಿತಿರುವ ತನ್ನ ಕುಮಾರನಿಂದ ಇಂದು ಆಳಲ್ಪಡುತ್ತಿದೆ (ಅಪೊಸ್ತಲರ ಕೃತ್ಯಗಳು 2:22-36). ಆ ರಾಜ್ಯ ಯಾವುದೆಂದರೆ ಸಭೆ ಆಗಿರುತ್ತದೆ (16:18, 19). ಪಂಚಶತ್ತಮ ದಿನದವರೆಗೂ ಈ ರಾಜ್ಯವು ಸ್ಥಾಪನೆಗೊಳಲಿಲ್ಲ, ಆ ಸಮಯದಲ್ಲಿ ಕ್ರಿಸ್ತನ ಕಾರ್ಯಗಳಿಂದ ಇಡಿ ಲೋಕದಲ್ಲೆಲ್ಲಾ ಚದುರಿಹೋಗಿದ್ದಿತ್ತು.

**ವಚನ 29.** ಯೇಸು ತನ್ನ ಕೇಳುಗರಿಗೆ **ಒಬ್ಬ ಬಲಿಷ್ಟನ ಮನೆ**ಯನ್ನು ಕೊಳ್ಳೆ ಹೊಡೆದದ್ದರ ಕುರಿತು ಒಂದು ಚಿಕ್ಕ ಸಾಮ್ಯವನ್ನು ಹೇಳುತ್ತಾನೆ (ನೋಡಿರಿ ಯೆಶಾಯ 49:24-26). **ಮೊದಲು** ಆತನನ್ನು ಕಟ್ಟಿಹಾಕದ ಹೊರತು ಇದು **ಅಸಾಧ್ಯ.** ಕಥೆಯಲ್ಲಿ ಬರುವ **ಬಲಿಷ್ಟ ವ್ಯಕ್ತಿ** ಸ್ಪಷ್ಟವಾಗಿ ಸೈತಾನನನ್ನು ಪ್ರತಿನಿಧಿಸುತ್ತಾನೆ. ಆತನ **ಮನೆ** ಎನ್ನುವಾಗ ಬಹುಶಃ ಆತನ ರಾಜ್ಯವನ್ನು ಸೂಚಿಸಬಹುದು. ಅದು, ಆತನ ಅಧೀನದಲ್ಲಿರುವ ಲೋಕವಾಗಿದೆ. ದೆವ್ವಗಳು ವಾಸವಾಗಿರುವ ಜನರೇ ಆತನ **ಆಸ್ತಿ.** "ಆಸ್ತಿ" (*skeuos*) ಎಂಬ ಶಬ್ದಕ್ಕೆ ಇರುವ ಗ್ರೀಕ್ ಶಬ್ದವನ್ನು "ಪಾತ್ರೆಗಳು" ಎಂದು ಸಹ ಅನುವಾದಿಸಬಹುದು. ವಸ್ತುಗಳನ್ನು ಹೊರತುಪಡಿಸಿ ಇದನ್ನು ಕೆಲವೊಮ್ಮೆ ಮನುಷ್ಯ ದೇಹಗಳನ್ನು ಸೂಚಿಸಲು ಸಹ ಉಪಯೋಗಿಸಲಾಗಿದೆ (ಅಪೊಸ್ತಲರ ಕೃತ್ಯಗಳು 9:15; 2 ಕೊರಿಂಥ 4:7; 1 ಥೆಸಲೋನಿಕ 4:4; 2 ತಿಮೊಥೆ 2:20, 21; 1 ಪೇತ್ರನು 3:7). ಈ ಶಬ್ದದ ಮೆತುವಾದ ಸ್ವಭಾವವು ಈ ಸಾಮ್ಯದಲ್ಲಿ ವಿಶೇಷವಾಗಿ ಉಪಯುಕ್ತವಾಗಿದೆ.

ಯೇಸು ಸೈತಾನ ರಾಜ್ಯದಲ್ಲಿ ಆತನನ್ನು ಕಟ್ಟಿಹಾಕುವ ಪೂರ್ವದಲ್ಲಿ **ಪ್ರವೇಶಮಾಡುವದಿಲ್ಲ** (ನೋಡಿರಿ ಪ್ರಕಟಣೆ 20:2). **ಕಟ್ಟಿಹಾಕು** (*deō*) ಈ ಪದಕ್ಕೆ ಇರುವ ಗ್ರೀಕ್ ಶಬ್ದ ಅಂದರೆ "ನಿಗ್ರಹಿಸು" ಅಥವಾ "ನಿರ್ಬಂದಿಸು" ಇದರ ಅರ್ಥ ಸೈತಾನನ ಬಲವನ್ನು ಸಂಪೂರ್ಣವಾಗಿ ಕಸಿದುಕೊಳ್ಳಲಾಗಿದೆ ಎಂದು ಅಲ್ಲ. ಯೇಸು ಸೈತಾನನ ರಾಜ್ಯವನ್ನು ಆಕ್ರಮಿಸಿದ್ದಾನೆ ಮತ್ತು ಅವನ ಬಲಿಪಶುಗಳನ್ನು ಆತನಿಂದ ಕಿತ್ತುಕೊಳ್ಳುತ್ತಾನೆ ಎಂಬುದನ್ನು ಈ ಸಾಮ್ಯವು ಸೂಚಿಸುತ್ತದೆ. ದೆವ್ವ ಹಿಡಿದ ಜೀವಿತಗಳನ್ನು ಕರ್ತನು ಹಿಂದಕ್ಕೆ ಪಡೆದುಕೊಳ್ಳುತ್ತಾನೆ.

**ವಚನ 30.** ಯೇಸು ತನ್ನ ಶೋತೃಗಳನ್ನು **ನನ್ನ ಪಕ್ಷಹಿಡಿಯದವನು ನಮಗೆ ವಿರೋಧಿ** ಎಂದು ಎಚ್ಚರಿಸಿದನು. ಒಬ್ಬ ವ್ಯಕ್ತಿ ಯೇಸು ದೇವರಾತ್ಮನ ಬಲದಿಂದ ಅದ್ಭುತಗಳನ್ನು ಮಾಡುತ್ತಾನೆಂದು ನಂಬಬೇಕು ಇಲ್ಲವೇ ಆತನು ಸೈತಾನ ಬಲದಿಂದ ಇವುಗಳನ್ನು ಮಾಡುತ್ತಾನೆಂದು ಹೇಳಬೇಕು. ಯೇಸುವಿನೊಂದಿಗೆ ಯಾರೊಬ್ಬರು ತಟಸ್ಥವಾ ಗಿರಲು ಸಾಧ್ಯವಿಲ್ಲ. ಆತನು ತಾನು ಯಾರೆಂದು ಹೇಳಿಕೊಂಡಿದ್ದಾನೋ ಆತನೇ ಆಗಿದ್ದಾನೆ ಇಲ್ಲವಾದಲ್ಲಿ ಆತನು ಈ ಲೋಕದಲ್ಲಿ ಬಂದುಹೋದ ಅಸಂಖ್ಯಾತ ಸುಳ್ಳು ಪ್ರವಾದಿಗಳಲ್ಲಿ ಒಬ್ಬನಾಗಿದ್ದಾನೆ. ಒಬ್ಬ ವ್ಯಕ್ತಿ ಆತನ ಪರವಾಗಿರಬೇಕು ಇಲ್ಲವೇ ಆತನಿಗೆ ವಿರೋಧವಾಗಿರ ಬೇಕು (10:32, 33).

ಕ್ರಿಸ್ತನು **ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದುರಿಸುವವನಾಗಿರುತ್ತಾನೆ** ಎಂದು ಸಹ ಹೇಳುತ್ತಾನೆ. ಹಿಂದಿನ ವಾಕ್ಯಭಾಗದಲ್ಲಿದಂತೆಯೇ (9:36; 10:6, 16), ಆತನ ಭಾಷೆಯು ಕುರಿಗಳನ್ನು ಕಾಯುವದನ್ನು ಆದರಿಸಿತ್ತು (1 ಅರಸುಗಳು 22:17; ಯೆಶಾಯ 40:11; ಯೆರೆಮೀಯ 31:10; ಯೆಹೆಜ್ಕೇಲ 34:11-16; ಮೀಕನು 2:12; ನೆಹೂಮ 3:18; ಜೆಕರ್ಯ 13:7). ಕುರುಬನು ಯೇಸುವಿನೊಂದಿಗೆ ಕಾರ್ಯ ಮಾಡುತ್ತಾನೆ ಮತ್ತು ಆತನ ಕುರಿಗಳನ್ನು ಒಟ್ಟಿಗೆ ಸೇರಿಸುತ್ತಾನೆ ಅಥವಾ ಯೇಸುವಿನ ವಿರುದ್ಧವಾಗಿ ಕೆಲಸವನ್ನು ಮಾಡುತ್ತಾನೆ ಮತ್ತು ಕುರಿಗಳನ್ನು ಬೇರೆ ಬೇರೆ ದಿಕ್ಕಿನೆಡೆಗೆ ಚದುರಿಸಿಬಿಡುತ್ತಾನೆ.

## ಆತ್ಮದ ವಿರುದ್ಧವಾಗಿ ದೇವದೂಷಣೆ (12:31, 32)

**[31]ಆದಕಾರಣ ನಿಮಗೆ ಹೇಳುತ್ತೇನೆ, ಮನುಷ್ಯರು ಮಾಡುವ ಪ್ರತಿಯೊಂದು ಪಾಪಕ್ಕೂ ದೂಷಣೆಗೂ ಕ್ಷಮಾಪಣೆ ಉಂಟಾಗುವದು; ಆದರೆ ಪವಿತ್ರಾತ್ಮದೂಷಣೆಗೆ ಕ್ಷಮಾಪಣೆಯಿಲ್ಲ.**
**[32]ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ ಮಾತಾಡಿದರೆ ಅದು ಅವನಿಗೆ ಕ್ಷಮಿಸಲ್ಪಡುವದು; ಪವಿತ್ರಾತ್ಮನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಇಹದಲ್ಲಾಗಲಿ ಪರದಲ್ಲಾಗಲಿ ಕ್ಷಮಿಸಲ್ಪಡುವದಿಲ್ಲ.**

**ವಚನ 31.** ಯೇಸು ತನ್ನ ಅಂತಿಮವಾದ ನ್ಯಾಯತೀರ್ಪಿನಲ್ಲಿ ಹಲವು ಬಾರಿ ಉಲ್ಲೇಖಿಸಿದ **ಪಾಪ**ವನ್ನು "ಕ್ಷಮಿಸಲಾರದ ಪಾಪ" ಎಂದು ಕರೆದಿದ್ದಾನೆ. ಸತ್ಯವೇದವು ಈ ಪದವನ್ನು ಉಪಯೋಗಿಸುವದಿಲ್ಲ, ಆದರೆ ಯೇಸು **ಪಾಪವು ಕ್ಷಮಿಸುವದಿಲ್ಲವೆಂದು** ಹೇಳಿದ್ದಾನೆ. ಅದು ಯಾವ ಪಾಪವಾಗಿದೆ? ಈ ಫರಿಸಾಯರು ಏನು ಮಾಡಿದರು? ಅವರು **ಪರಿಶುದ್ಧಾತ್ಮನ** ಬಲವನ್ನು ಸೈತಾನನಿಗೆ ಸಲ್ಲಿಸಿದರು. ಅದ್ಭುತಗಳು ಆತ್ಮನಿಂದ ನಡೆದವು ಎಂದು ಅವರು ಹೇಳಿದರು - ಉದಾಹರಣೆಗೆ ಯೇಸು ದೆವ್ವಗಳನ್ನು ಬಿಡಿಸಿದ್ದು - ಅದೆಲ್ಲವನ್ನು "ಅಶುದ್ಧ" ಅಥವಾ "ದುಷ್ಟ" ಆತ್ಮನ ಬಲದಿಂದ ಮಾಡಿದನು ಎಂದು ಅವರು ಹೇಳುತ್ತಿದ್ದರು (ಮಾರ್ಕ 3:30). ಆದುದರಿಂದ, ಅವರು ಪವಿತ್ರಾತ್ಮನನ್ನು ದೂಷಿಸಿದರು. ಸಂಕ್ಷಿಪ್ತವಾಗಿ ಹೇಳಬೇಕಾದರೆ, **ದೇವದೂಷಣೆ** (*blasphēmia*) ದೈವತ್ವವನ್ನು ಹೀನೈಸುವ ಮಾತಾಗಿದೆ.

ಯೇಸು ಪವಿತ್ರಾತ್ಮನ ವಿರುದ್ಧ ದೇವದೂಷಣೆಯ ಕುರಿತು ಎಚ್ಚರಿಸುತ್ತಾನೆ, ಶಾಸನಕ್ಕೆ ಎದುರುಬಿದ್ದು ಪಾಪ ಮಾಡುವವರಿಗೆ ಹಳೆ ಒಡಂಬಡಿಕೆಯಲ್ಲಿ ಇದು ಏಕರೂಪವಾಗಿದೆ. ಅರಣ್ಯಕಾಂಡ 15:30 ಹೀಗೆ ಹೇಳುತ್ತದೆ, "ಆದರೆ ಸ್ವದೇಶದವನಾಗಲಿ ಅನ್ಯದೇಶದವನಾಗಲಿ ಯಾವನಾದರೂ ಮನಃ ಪೂರ್ವಕವಾಗಿ ಹಟದಿಂದ ['ಬಲವಾದ ಹಸ್ತದೊಂದಿಗೆ' (RSV)], ಪಾಪವನ್ನು ಮಾಡಿದರೆ ಅವನು ಯೆಹೋವನನ್ನು ದೂಷಿಸಿದವನಾದ್ದರಿಂದ ಕುಲದಿಂದ ತೆಗೆದು ಹಾಕಲ್ಪಡಬೇಕು." ಧರ್ಮೋಪದೇಶ ಕಾಂಡ 29:20 ಸಹ ವಿಗ್ರಹಾರಾಧನೆ ಮತ್ತು ದಂಗೆಯೇಳುವ ವ್ಯಕ್ತಿಗಳನ್ನು "ದೇವರು ಎಂದಿಗೂ ಕ್ಷಮಿಸಲು ಇಚ್ಛಿಸುವದಿಲ್ಲ"; "ದೇವರು ಅವನ ಹೆಸರನ್ನು ಭೂಮಿಯ ಮೇಲೆ ಇಲ್ಲದಂತೆ ಮಾಡುವನು" ಎಂದು ಹೇಳುತ್ತದೆ.

**ವಚನ 32.** ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ **ಮಾತಾಡಿದರೆ ಅದು ಅವನಿಗೆ ಕ್ಷಮಿಸಲ್ಪಡುವ ಸಾಧ್ಯತೆ ಇದೆ.** ನಂತರ, ಪೇತ್ರನು ಯೇಸುವನ್ನು ಮೂರು ಸಾರಿ ಅಲ್ಲಗಳೆದನು, ಆದಾಗ್ಯೂ ಆತನಿಂದ ಕ್ಷಮಿಸಲ್ಪಟ್ಟನು ಮತ್ತು ಪುನಃ ಸೇವೆಗೆ ಸೇರ್ಪಡೆಯಾದನು (26:69-75; ಯೋಹಾನ 21:15-17). ಪೌಲನು "ದೇವದೂಷಕನೂ ಮತ್ತು ಹಿಂಸೆಮಾಡುವವನು ಮತ್ತು ಅಕ್ರಮಣಕಾರಿಯಾಗಿದ್ದರೂ" ಅವನಿಗೆ ಕ್ಷಮಾಪಣೆ ದೊರೆಯಿತು (1 ತಿಮೊಥೆ 1:13; ನೋಡಿರಿ ಅಪೊಸ್ತಲರ ಕೃತ್ಯಗಳು 9:1, 2).

ಹಾಗಿದ್ದರೂ, ಯಾರು ಪವಿತ್ರಾತ್ಮನ ವಿರೋಧವಾಗಿ ಮಾತನಾಡುತ್ತಾರೋ ಅವರಿಗೆ ಕ್ಷಮಾಪಣೆಯಿಲ್ಲ. ಈ ವಾಕ್ಯಭಾಗವು ಕ್ಷಮಾಪಣೆಯನ್ನು ಹೊಂದಿಕೊಳ್ಳುವದಕ್ಕೆ ಅಸಮರ್ಥರು ಎಂದು ಹೇಳುವ ಕೆಲವು ಕಠಿಣವಾದ ವಾಕ್ಯಭಾಗಗಳಲ್ಲಿ ಒಂದಾಗಿದೆ (ಇಬ್ರಿಯ 6:4-6; 10:26-31; 1 ಯೋಹಾನ 5:16, 17). ಈ ಪಾಪವು ನಂಬಿಕೆಯ ಬುಡವನ್ನೇ ತಿರಸ್ಕರಿಸುವ ಪಾಪಕ್ಕೆ ಸಂಬಂಧಿಸಿದ್ದಾಗಿದೆ ಎಂದು J. W. McGarvey ರವರು ಆಲೋಚಿಸಿದ್ದಾರೆ:

> ಮನುಷ್ಯಕುಮಾರನ ವಿರೋಧವಾಗಿ ಮಾತಾಡುವದಕ್ಕಿಂತ ಪವಿತ್ರಾತ್ಮನ ವಿರುದ್ಧವಾಗಿ ಮಾತಾಡುವದು ಖಂಡಿತವಾಗಿಯೂ ಬಹಳ ಅಪಾಯಕಾರಿಯಾಗಿದೆ, ಬಹುಶಃ ಅದು ನಮ್ಮ ಗ್ರಹಿಕೆಗೆ ಮೀರಿದ್ದಾಗಿರಬಹುದು; ಆದರೆ ನಮಗೆ ಇಷ್ಟು ಮಾತ್ರ ಗೊತ್ತು, ಒಬ್ಬನು

> ಎರಡನೆಯವನ ವಿರುದ್ಧವಾಗಿ ಮಾತನಾಡಿದರೆ ಅನಂತರ ಪವಿತ್ರಾತ್ಮನ ಸಾಕ್ಷಿಯ ಮೂಲಕ ತಿಳಿಸಿ ಹೇಳಬಹುದು, ಮತ್ತು ವಿಶ್ವಾಸಿಯಾಗಬಹುದು, ಆದರೆ ಅವನು ಪವಿತ್ರಾತ್ಮನು ನೀಡುವ ಸಾಕ್ಷಿಯನ್ನು ತಿರಸ್ಕರಿಸಿ ಸೈತಾನನ ಮೇಲೆ ದೋಷ ವನ್ನು ಹೊರಿಸಿದರೆ, ಅವನು ನಂಬಿಕೆಗೆ ಆಧಾರವಾದ ಒಂದೇ ಸಾಕ್ಷಿಯನ್ನು ತಿರಸ್ಕರಿಸುವವನಾಗಿದ್ದಾನೆ; ಮತ್ತು ನಂಬಿಕೆಯಿಲ್ಲದೇ ಕ್ಷಮಾಪಣೆಯಿಲ್ಲ.[5]

ಆದದರಿಂದ, ಯೇಸು "ಕ್ಷಮಿಸಲಾಗದಿರುವ ಪಾಪಗಳ" ಕುರಿತು ಚರ್ಚೆಮಾಡುತ್ತಿರುವಾಗ, ಆತನು ತನ್ನ ಸೇವೆಯನ್ನು ಹಾಳು ಮಾಡಲು ಪ್ರಯತ್ನಿಸುತ್ತಿರುವ ಮತ್ತು ಆತನು ಮಾಡಿದ ಅದ್ಭುತಗಳನ್ನು ಖ್ಯಾತಿಯನ್ನು ಬೆಲ್ಜಿಬೂಲನಿಗೆ (ಸೈತಾನನಿಗೆ) ಆರೋಪಿಸಿದ ಫರಿಸಾಯರನ್ನು ಸಂಭೋಧಿಸಿದನು.

## ಮರ ಮತ್ತು ಅದರ ಫಲ (12:33-37)

**33ಮರ ಒಳ್ಳೇದಂದರೆ ಅದರ ಫಲವೂ ಒಳ್ಳೇದನ್ನಿರಿ. ಮರ ಹುಳುಕು ಅಂದರೆ ಅದರ ಫಲವೂ ಹುಳುಕು ಅನ್ನಿರಿ. ಫಲದಿಂದಲೇ ಮರದ ಗುಣವು ಗೊತ್ತಾಗುವದು. 34ಸರ್ಪಜಾತಿಯವರೇ, ನೀವು ಕೆಟ್ಟವರಾಗಿರಲಾಗಿ ಒಳ್ಳೆಯ ಮಾತುಗಳನ್ನಾಡುವದಕ್ಕೆ ನಿಮ್ಮಿಂದ ಹೇಗಾದಿತು? ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು, 35ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ; ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ. 36ಇದಲ್ಲದೆ ನಾನು ನಿಮಗೆ ಹೇಳುವದೇನೆಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು. 37ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪುಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ ಅಂದನು.**

**ವಚನ 33.** ಪರ್ವತ ಪ್ರಸಂಗಕ್ಕಿಂತ ಮುಂಚಿತವಾಗಿ ಯೇಸು ಸುಳ್ಳು ಬೋಧಕರ ಕುರಿತಾಗಿ ಹೇಳಿದ್ದಾನೆ, "ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ ... ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು, ಮತ್ತು ಹುಳುಕು ಮರವು ಒಳ್ಳೇ ಫಲವನ್ನು ಕೊಡಲಾರದು" (7:16-18). ಇಲ್ಲಿ ಆತನು ಪುನಃ **ಮರ ಮತ್ತು ಅದರ ಫಲಗಳ** ಕುರಿತಾಗಿರುವ ಕಲ್ಪನೆಯನ್ನು ಉಪಯೋಗಿಸಿದ್ದಾನೆ. ಈ ವ್ಯಾಖ್ಯಾನವು ನೇರವಾಗಿ ಫರಿಸಾಯರನ್ನು ಗುರಿಯಾಗಿಟ್ಟುಕೊಂಡು ಹೇಳಿದ್ದಾಗಿತ್ತು. ಯೇಸು ಸೈತಾನನ ಬಲದಿಂದ ದೆವ್ವಗಳನ್ನು ಬಿಡಿಸುತ್ತಾನೆಂಬ ಕೆಟ್ಟ ಆರೋಪವನ್ನು ಅವರು ತಮ್ಮ ಹೃದಯದಲ್ಲಿ ಇಟ್ಟುಕೊಂಡಿದ್ದರು. ಅಪ್ರಾಮಾಣಿಕ ಗ್ರಂಥ Sirach 27:6ರಲ್ಲಿ "ಫಲವು ಮರವನ್ನು ಬೆಳೆಸಿದ ರೀತಿಯನ್ನು ಬಹಿರಂಗಪಡಿಸುತ್ತದೆ; ಅದೇ ರೀತಿಯಲ್ಲಿ ಮನುಷ್ಯನ ಮಾತುಗಳು ಆತನ ಮನಸ್ಸಿನ ಸಂಸ್ಕೃತಿಯನ್ನು ಬಹಿರಂಗಪಡಿಸುತ್ತವೆ" ಎಂದು (NRSV) ಹೇಳುತ್ತದೆ.

**ವಚನ 34.** ಯೇಸು ತನ್ನನ್ನು ಟೀಕಿಸುವವರನ್ನು **ಸರ್ಪಜಾತಿಯವರೇ** ಎಂದು ಕರೆಯುತ್ತಾನೆ. ಸ್ನಾನಿಕನಾದ ಯೋಹಾನನು ಯೋರ್ದಾನ ನದಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಳ್ಳಲು ಬಂದ ಫರಿಸಾಯರಿಗೆ ಮತ್ತು ಸದ್ದುಕಾಯರಿಗೆ ಇದೇ ರೀತಿಯ ಪದಪ್ರಯೋಗವನ್ನು ಮಾಡಿದನು (3:7). "ಜಾತಿ" (*gennēma*) ಎನ್ನುವದಕ್ಕೆ ಗ್ರೀಕ್ ಶಬ್ದದಲ್ಲಿ "ಸಂತತಿ" ಎಂದು ಸಹ ಅನುವಾದಿಸಲಾಗಿದೆ (ನೋಡಿರಿ 23:29-33). "ಸರ್ಪ" (*echidna*) ಎನ್ನುವ ಶಬ್ದವನ್ನು ಮೆಡಿಟರೇನಿಯನ್ ಪ್ರದೇಶದಲ್ಲಿ ವಾಸಿಸುವ ವಿವಿಧ ಜಾತಿಯ

ವಿಷಪೂರಿತ ಹಾವುಗಳಿಗೆ ಅನ್ವಯಿಸಲಾಗುತ್ತದೆ. ಪೌಲನು ಮೇಲಿತ ದ್ವೀಪದಲ್ಲಿ ಕಟ್ಟಿಗೆಗಳನ್ನು ಕೂಡಿಸುವ ಸಂದರ್ಭದಲ್ಲಿ ಒಂದು ಹಾವು ಅವನನ್ನು ಕಚ್ಚಿತು (ಅಪೊಸ್ತಲರ ಕೃತ್ಯಗಳು 28:3-6). ಇಂಥಹಾ ಹಾವುಗಳು ಕಚ್ಚುವದರಿಂದ ಬಹಳ ನೋವು ಉಂಟಾಗುತ್ತದೆ ಕೆಲವೊಮ್ಮೆ ಅದು ಪ್ರಣಾಂತಕವಾಗುತ್ತದೆ.

ಫರಿಸಾಯರು ಗುಂಪಿನಲ್ಲಿ ಸಂಚರಿಸುವ ಪ್ರಾಣಘಾತಕವಾದ ವಿಷ ಸರ್ಪದಂತಿದ್ದಾರೆ, ಮನುಷ್ಯನಿಂದ ಸೃಷ್ಟಿಸಲ್ಪಟ್ಟ ವಿಷಪೂರಿತ ಸಿದ್ಧಾಂತಗಳನ್ನು ಕಕ್ಕುತ್ತಾರೆ (23:15). ಅವರ ಭ್ರಷ್ಟಚಾರದ ಬೋಧನೆಗಳು ಆಲಿಸುವವರ ಹೃದಯದಲ್ಲಿ ವಿಷವನ್ನು ತುಂಬುತ್ತವೆ, ಮತ್ತು ಅವರ ಮನಸ್ಸನ್ನು ದೇವರ ಸತ್ಯಕ್ಕೆ ವಿರುದ್ಧವಾಗಿ ಮುಚ್ಚಿಬಿಡುತ್ತದೆ.

ಯೇಸುವಿಗೆ ವಿರುದ್ಧವಾಗಿ ಯಾರು ಮಾತಾಡುತ್ತಾರೋ ಅವರು ತಾವು ನೀಡುವ ಹೇಳಿಕೆಗಳಿಂದಾಗಿ ನ್ಯಾಯತೀರ್ಪಿಗೆ ಒಳಗಾಗುತ್ತಾರೆ ಎಂಬುದನ್ನು ಆತನು ತೋರಿಸಿದನು. ಆತನು, **ನೀವು ಕೆಟ್ಟವರಾಗಿರಲಾಗಿ ಒಳ್ಳೆಯ ಮಾತುಗಳನ್ನಾಡುವದಕ್ಕೆ ನಿಮ್ಮಿಂದ ಹೇಗಾದಿತು? ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು** ಎಂದು ಹೇಳಿದನು. ಅವರು ಪವಿತ್ರ ಮತ್ತು ಗೌರವಯುತವಾದ ನಡತೆಯನ್ನು ಪ್ರದರ್ಶಿಸಿದರು ಆದರೆ ಅವರ ಬಾಯಿ ಅವರ ಭ್ರಷ್ಟ ಹೃದಯಕ್ಕೆ ಸಾಕ್ಷಿಯಾಗಿತ್ತು (ನೋಡಿರಿ 15:18, 19).

**ವಚನ 35.** *Thēsauros* ಗ್ರೀಕ್ ಶಬ್ದ **ಖಜಾನೆ** ಅಥವಾ ಅದನ್ನು ಸಂಗ್ರಹಿಸಿಡುವ ಸ್ಥಳವನ್ನು ಉಲ್ಲೇಖಿಸುತ್ತದೆ - ಇದು "ಖಜಾನೆಪೆಟ್ಟಿಗೆ" ಅಥವಾ "ಉಗ್ರಾಣ" ಎಂದು ಹೇಳುವಂಥ ಶಬ್ದವಾಗಿದೆ (2:11; 6:19, 20ರ ಮೇಲಿನ ವ್ಯಾಖ್ಯಾನ ನೋಡಿರಿ). ಮನುಷ್ಯನ ಹೃದಯದಲ್ಲಿರುವದೇ ಬಾಯೊಳಗಿಂದ ಹೊರಡುತ್ತದೆ. ಒಬ್ಬನ ಹೃದಯಲ್ಲಿ **ಒಳ್ಳೆಯ** ವಿಚಾರಗಳಿದ್ದರೆ, ಅವನು ಅದನ್ನೇ ಮಾತನಾಡುತ್ತಾನೆ. ಇನ್ನೊಂದು ರೀತಿಯಲ್ಲಿ, ಅವನು ತನ್ನ ಹೃದಯದಲ್ಲಿ **ಕೆಟ್ಟ** ತನದಿಂದ ತುಂಬಿಕೊಂಡಿದ್ದರೆ ಅವನು ಅದನ್ನೆ ಮಾತನಾಡಲು ಸಾಧ್ಯ (ಜ್ಞಾನೋಕ್ತಿ 4:23, 24).

**ವಚನಗಳು 36, 37.** ಯೇಸು ತನ್ನ ಶ್ರೋತ್ರುಗಳನ್ನು ಎಚ್ಚರಿಸಿ, **ಅವರು ಸುಮ್ಮನೆ ಆಡುವ ಪ್ರತಿಯೊಂದು ಮಾತಿಗೂ ನ್ಯಾಯತೀರ್ಪಿನದಿಂದು ಲೆಕ್ಕವನ್ನು ಕೊಡಬೇಕು** ಎಂದು ಹೇಳಿದನು. "ಸುಮ್ಮನೆ" (*argos*) ಎನ್ನುವ ಪದವನ್ನು "ಮೈಗಳ್ಳತನ" ಅಥವಾ "ಕೆಲಸಕ್ಕೆ ಬಾರದ" ಎಂದು ಸಹ ಅನುವಾದಿಸಬಹುದು. ಜನರು ಸಾಮಾನ್ಯವಾಗಿ "ಮೈಗಳ್ಳ" ತನದ ಮಾತುಗಳು ಎಂದು ಯೋಚಿಸುವ ಮಾತುಗಳನ್ನು ಯೇಸು ಇಲ್ಲಿ ಉಲ್ಲೇಖಿಸುತ್ತಿಲ್ಲ. ಬದಲಾಗಿ ಆತನು ಮತ್ಸರದ, ಹಾನಿಕರವಾದ, ಮತ್ತು ಸುಳ್ಳುನಿಂದನೆ ಮಾತುಗಳನ್ನು ಕುರಿತು ಉಲ್ಲೇಖಿಸುತ್ತಾನೆ.[6] ಇಂಥಹಾ ಅಯೋಗ್ಯವಾದ ಮಾತುಗಳಿಂದ ಯಾವುದೇ ರೀತಿಯಲ್ಲಿ ಒಳ್ಳೆಯದಾಗುವದಿಲ್ಲ, ಮತ್ತು ಅವುಗಳಿಗಾಗಿ **ನ್ಯಾಯತೀರ್ಪಿನಲ್ಲಿ ನಿಂತುಕೊಳ್ಳಬೇಕು.** ವ್ಯಕ್ತಿಯ ಮಾತುಗಳು ನ್ಯಾಯತೀರ್ಪು ಅಥವಾ ಖಂಡನೆಯ ಪರಿಣಾಮವನ್ನು ನೀಡುತ್ತದೆ. ಒಬ್ಬನ ಮಾತುಗಳು ಆತನ ನಿಜವಾದ ಗುಣವನ್ನು ಪ್ರಕಟಿಸುತ್ತದೆ ಮತ್ತು ದೇವರ ನ್ಯಾಯಲಯದಲ್ಲಿ ನ್ಯಾಯತೀರ್ಪಿಗೆ ಆಧಾರವಾಗಿರುತ್ತವೆ.

### ಪಾಠಗಳು

## ನೀತಿಯುಳ್ಳ ನ್ಯಾಯ ತೀರ್ಪು (12:22-30)

ಕ್ರಿಸ್ತ ಪೂರ್ವ ಕೆಲವು ಶತಮಾನಗಳ ಹಿಂದೆ, ಯೆಶಾಯ ಪ್ರವಾದಿಯು ಈ ನಿರ್ಣಾಯಕ ಮಾತುಗಳನ್ನು ಹೇಳಿದ್ದಾನೆ: "ಅಯ್ಯೋ, ಕೆಟ್ಟದ್ದನ್ನೂ ಒಳ್ಳೆಯದೆಂದೂ ಒಳ್ಳೆಯದನ್ನು ಕೆಟ್ಟದೆಂದೂ ಬೋಧಿಸಿ ಕತ್ತಲನ್ನು ಬೆಳಕೆಂದೂ ಬೆಳಕನ್ನು ಕತ್ತಲೆಂದೂ ಸಾದಿಸಿ ಕಹಿಯು ಸಹಿ, ಸಿಹಿಯು ಕಹಿ ಎಂದು ಸ್ಥಾಪಿಸುವವರ ಗತಿಯನ್ನು ಏನೆಂದು ಹೇಳಲಿ!" (ಯೆಶಾಯ

5:20). ಫರಿಸಾಯರು ಪವಿತ್ರಾತ್ಮನ ಬಲವನ್ನು ಬೆಲ್ಜೆಬೂಲನಿಗೆ, ದೆವ್ವಗಳ ಒಡೆಯನಿಗೆ ತಪ್ಪಾಗಿ ಹೋಲಿಸಿದರೆ, ಅವರು ಈ ವಿಧದ ನಂಬಿಕೆ ತಪ್ಪಿಸುವ ನ್ಯಾಯತೀರ್ಪನ್ನು ಪ್ರದರ್ಶಿಸುವವರಾಗಿದ್ದಾರೆ. ಇದಕ್ಕೆ ಭಿನ್ನವಾಗಿ, ನಾವು ನಮ್ಮ ದಿನನಿತ್ಯದ ಕಾರ್ಯಗಳಲ್ಲಿ ಪ್ರಾಮಾಣಿಕವಾದ ತೀರ್ಪನ್ನು ನೀಡುವವರಾಗಿರಬೇಕು. ನಾವು ಸಂಗತಿಗಳನ್ನು ಪರಿಶೋಧಿಸಬೇಕು ಮತ್ತು ನಿರ್ಧಾರಕ್ಕೆ ಬರುವ ಪೂರ್ವದಲ್ಲಿ ಸಾಕ್ಷಿಗಳನ್ನು ಸರಿಯಾಗಿ ಮೌಲ್ಯಮಾಪನವನ್ನು ಮಾಡಬೇಕು. ನಮ್ಮ ಪೂರ್ವಕಲ್ಪಿತ ವಿಚಾರಗಳು, ಸ್ವ-ಆಸಕ್ತಿ ಮತ್ತು ಒಲವು ನಮ್ಮ ನಿರ್ಧಾರಗಳನ್ನು ವಕ್ರಗೊಳಿಸಬಾರದು. ಯೇಸು "ಕಣ್ಣಿಗೆ ತೋರಿದ್ದರ ಮೇಲೆ ತೀರ್ಪು ಮಾಡಬೇಡಿರಿ. ನ್ಯಾಯವಾದ ತೀರ್ಪುಮಾಡಿರಿ" ಎಂದು ಬೋಧಿಸಿದ್ದಾನೆ (ಯೋಹಾನ 7:24).

David Stewart

## "ಭೇದ ಹುಟ್ಟಿದ ಮನೆ" (12:25)

"ಭೇದ ಹುಟ್ಟಿದ ಮನೆ" ಒಂದು ಉದಾಹರಣೆಯನ್ನು ಕೆಲವೊಮ್ಮೆ ಅಬ್ರಾಹಾಮ ಲಿಂಕನ್‌ರ ಮೇಲೆ ಹೋಲಿಸಲಾಗಿದೆ, ಯಾಕೆಂದರೆ ಅವರು ತಮ್ಮ ಹೆಸರಾಂತ ಭಾಷಣಗಳಲ್ಲಿ ಇದನ್ನು ಮುಖ್ಯ ವಿಷಯವನ್ನಾಗಿ ಉಪಯೋಗಿಸುತ್ತಿದ್ದರು. ಲಿಂಕನ್ ಆ ಸಮಯದಲ್ಲಿ ಸಿನೆಟ್‌ನ ಸದಸ್ಯರಾಗಿದ್ದರು, ಆದರೆ ನಂತರ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷರಾದರು. "ತನ್ನಲ್ಲಿ ಭೇದ ಹುಟ್ಟಿದ ಮನೆ ನಿಲ್ಲದು. ಅರ್ಧ ಗುಲಾಮ ಮತ್ತು ಅರ್ಧ ಸ್ವತಂತ್ರವಿರುವ ಈ ಸರ್ಕಾರ ಶಾಶ್ವತವಾಗಿ ನಿಲ್ಲುವದಿಲ್ಲ ಎಂದು ನಾನು ನಂಬುತ್ತೇವೆ"[7] ಎಂದು ಘೋಷಿಸಿದರು. ಲಿಂಕನ್‌ರವರು ಸತ್ಯವೇದವನ್ನು ಓದುವದರಲ್ಲಿ ನಿಷ್ಟರಾಗಿದ್ದರು ಹೀಗೆ ಭಾಷೆಯನ್ನು ಯೇಸುವಿನಿಂದ ಪಡೆದುಕೊಂಡಿದ್ದರು.

ಕರ್ತನು ಹೇಳುವ ಅಂಶವೇನೆಂದರೆ ಭೇದವು ಯಾವುದೇ ಸಂಸ್ಥೆಯನ್ನು ಕೆಡವಿಬಿಡುತ್ತದೆ. ನಾಗರೀಕ ಯುದ್ಧಗಳು ಅನೇಕ ದೇಶಗಳನ್ನು ವಿಭಾಗಿಸಿವೆ ಮತ್ತು ಅವುಗಳ ನಾಶಕ್ಕೆ ಕಾರಣವಾಗಿವೆ. ಸಮಾಜ, ಸಭೆ ಅಥವಾ ಕುಟುಂಬದೊಳಗೆ ಭೇದ ನಾಶನಕ್ಕೆ ನಡೆಸುತ್ತದೆ. ಇದಕ್ಕೆ ಭಿನ್ನವಾಗಿ, ಕ್ರೈಸ್ತರು ಮಾದರಿಯ ನಾಗರೀಕರಾಗಿ, ಸಭೆಯ ಸದಸ್ಯರಾಗಿ, ಮತ್ತು ಕುಟುಂಬದ ಸದಸ್ಯರಾಗಿ ಐಕ್ಯತೆಯನ್ನು ಸಾರುವವರಾಗಿರಬೇಕು (1 ಪೇತ್ರನು 2:17; ಎಫೆಸ 4:3; 5:22-6:4).

## ಬಲಿಷ್ಟನನ್ನು ಕಟ್ಟಿಹಾಕುವದು (12:29)

ದೆವ್ವಗಳನ್ನು ಬಿಡಿಸಿ, ಯೇಸು ತನಗೆ ಸೈತಾನನ ಮೇಲೆ ಅಧಿಕಾರವಿದೆ ಎಂದು ತೋರಿಸಿಕೊಟ್ಟನು; ಅವನು ಬಲಿಷ್ಟನನ್ನು ಕಟ್ಟಿ ಹಾಕಿದನು ಮತ್ತು ಮನೆಯನ್ನು ಸೂರೆಮಾಡಿದನು. ಇಂದು ಲೋಕದಲ್ಲಿರುವ ಎಲ್ಲಾ ಕೆಟ್ಟತನದಿಂದಾಗಿ ಅಧೈರ್ಯಪಡುವದು ನಮಗೆ ಸರಳವಾಗಿದೆ. ನಾವು "ಲೋಕದಲ್ಲಿರುವವನಿಗಿಂತ ನಮ್ಮೊಳಗಿರುವಾತನು ಹೆಚ್ಚಿನವನಾಗಿದ್ದಾನೆ" ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (1 ಯೋಹಾನ 4:4). ಒಂದು ಚಿರಪರಿಚಿತವಾದ ಸಂಗೀತ "ತಪ್ಪು ಬಲಿಷ್ಟವಾಗಿ ತೋರಿದಾಗ್ಯೂ, ದೇವರು ಈಗಲೂ ಆಳುವಾತನಾಗಿದ್ದಾನೆ"[8] ಎಂದು ನಮಗೆ ಜ್ಞಾಪಿಸುತ್ತದೆ. ಪೌಲನು "ದೇವರು ನಮ್ಮ ಸಂಗಡವಿರುವಾಗ ನಮ್ಮನ್ನು ಎದುರಿಸುವವರು ಯಾರು?" ಎಂದು ಬರೆದಿದ್ದಾನೆ (ರೋಮಾಪುರ 8:31; NIV). "ದೇವರು ಮತ್ತು ನಾನು ಬಹುಮತವಾಗಿದ್ದೇವೆ"[9] ಎಂದು ಹೇಳಲಾಗಿದೆ. ಸೈತಾನನಿಗೆ ಅಂತ್ಯದ ಮರಣದಂಡನೆ ತೀರ್ಪಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು; ಆತನ ಅಂತ್ಯದ ವಿಧಿ ಈಗಾಗಲೇ ಮುದ್ರೆಹಾಕಲಾಗಿದೆ (ಪ್ರಕಟಣೆ 20:10).

David Stewart

## ನಿರ್ಲಕ್ಷದ ಮಾತುಗಳು (12:36, 37)

ಒಬ್ಬ ವ್ಯಕ್ತಿ ಸಾರ್ವಜನಿಕವಾಗಿ ತನ್ನ ಮಾತುಗಳನ್ನಾಡುವಾಗ ಬಹಳ ಜಾಗೃತಿವಹಿಸಬಹುದು, ತನ್ನ ವ್ಯಕ್ತಿಗತ ಕ್ಷಣಗಳಲ್ಲಿ ತನ್ನ ಮಾತುಗಳನ್ನು ಕಾಯ್ದುಕೊಳ್ಳುವದನ್ನು ಬಿಟ್ಟು ಕೆಟ್ಟ ಮತ್ತು ಅಶುದ್ಧ ಮಾತುಗಳನ್ನು ಆಡಬಹುದು. ಅದಕ್ಕಾಗಿ ಯಾಕೋಬನು ಬರೆದಿದ್ದಾನೆ,

> ಆದರೆ ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು. ಅದು ಸುಮ್ಮನಿರಲಾರದ ಕೆಡುಕಾಗಿದೆ; ಮರಣಕರವಾದ ವಿಷದಿಂದ ತುಂಬಿ ಇದೆ. ನಾಲಿಗೆಯಿಂದ ತಂದೆಯಾದ ಕರ್ತನನ್ನು ಕೊಂಡಾಡುತ್ತೇವೆ; ಅದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು ಶಪಿಸುತ್ತೇವೆ. ಅದೇ ಬಾಯಿಂದ ಸ್ತುತಿ ಶಾಪ ಎರಡೂ ಬರುತ್ತವೆ. ನನ್ನ ಸಹೋದರರೇ, ಹೀಗಿರುವದು ಯೋಗ್ಯವಲ್ಲ. ಊಟೆಯ ಒಂದೇ ಬಾಯಿಂದ ಸಿಹಿನೀರು ಕಹಿನೀರು ಎರಡೂ ಹೊರಡುವದುಂಟೇ? (ಯಾಕೋಬ 3:8-11).

ದೇವರು ನಮ್ಮ ಮಾತುಗಳನ್ನು ಗಮನಿಸುತ್ತಾನೆ, ನಾವು ಮಾತನಾಡುವ ಮಾತುಗಳಿಗೆ ನಾವು ಲೆಕ್ಕ ಕೊಡಬೇಕು. ದೇವರು ನಮ್ಮ ಬಾಯಿಂದ ಹೊರಡುವ ಪ್ರತಿಯೊಂದು ಮಾತುಗಳನ್ನು ಆಲಿಸುತ್ತಾನೆ ಎಂದು ನಾವು ನಂಬಿದ್ದರೆ, ನಾವು ಏನು ಹೇಳುತ್ತೇವೋ ಅದರಲ್ಲಿ ಎಂಥಹಾ ವ್ಯತ್ಯಾಸ ಕಂಡುಬರುತ್ತದೆ! ನಮ್ಮ ಮಾತುಗಳು ಈ ಜೀವಿತದಲ್ಲಿ ಇತರರಿಗೆ ಹಾನಿಯನ್ನುಂಟು ಮಾಡಬಹುದು ಮತ್ತು ನಮ್ಮ ಕುರಿತಾಗಿ ಕೆಟ್ಟ ಆಲೋಚನೆಗಳನ್ನು ಮಾಡಲು ಕಾರಣವಾಗಬಹುದು, ಇದು ಸುಮ್ಮನೇ ಮಾತನಾಡುವ ಮಾತಿನ ಅಪಾಯವಲ್ಲ. ನಿಜವಾದ ಅಪಾಯವೆಂದರೆ, ನ್ಯಾಯತೀರ್ಪಿನ ದಿನದಲ್ಲಿ ನಾವು ದೇವರ ಮುಂದೆ ನಿಂತುಕೊಳ್ಳುವಾಗ ಆಗುವ ಪರಿಣಾಮದ ಕುರಿತು ಯೇಸು ಪ್ರಸ್ತಾಪಿಸುತ್ತಾನೆ. ನಮ್ಮ ಮಾತುಗಳು ನಮ್ಮನ್ನು ಖಂಡನೆಗೆ ಗುರಿಮಾಡುತ್ತವೆ ಇಲ್ಲವೆ ನೀತಿವಂತರೆಂದು ನಿರ್ಣಯಿಸುತ್ತವೆ.

---

ಟಿಪ್ಪಣಿಗಳು

[1]ನೋಡಿರಿ ಸೊಲೊಮೋನನ ಕೀರ್ತನೆಗಳು 17.21. [2]ಯೆಹೂದ್ಯರ ಮಧ್ಯದಲ್ಲಿದ್ದ ಇತರರು ಯೇಸುವಿಗೆ ದೆವ್ವಹಿಡಿದಿದೆ ಎಂದು ಆರೋಪಿಸಿದರು (ಯೋಹಾನ 7:20; 8:48, 52; 10:20). ತರುವಾಯ ದಿನಗಳಲ್ಲಿ, ಅವಿಶ್ವಾಸಿಗಳಾದ ಯೆಹೂದ್ಯರು ಯೇಸುವಿಗೆ ಮಾಂತ್ರಿಕನೆಂದು ಮುದ್ರೆಹಾಕಿದರು. (Talmud *Sanhedrin* 43a; 107b; Justin Martyr *Dialogue with Trypho* 69; Origen *Against Celsus* 1.28.) [3]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 363. [4]ದೆವ್ವ ಬಿಡಿಸುವ ಯೆಹೂದ್ಯರ ಮಾಂತ್ರಿಕರ ಉದಾಹರಣೆಗಾಗಿ ನೋಡಿರಿ ಮಾರ್ಕ 9:38; ಅಪೊಸ್ತಲರ ಕೃತ್ಯಗಳು 19:13-16; Josephus *Antiquities* 8.2.5; Wars 7.6.3; Justin Martyr *Dialogue with Trypho* 85; Irenaeus *Against Heresies* 2.6.2. [5]J. W. McGarvey, *The New Testament Commentary,* vol. 1, *Matthew and Mark* (N.p., 1875; reprint, Delight, Ark.: Gospel Light Publishing Co., n.d.), 110. [6]H. Leo Boles, *A Commentary on the Gospel According to Matthew* (Nashville: Gospel Advocate Co., 1936), 273. [7]Abraham Lincoln, speech delivered to the Republican State Convention, Springfield, Illinois, 16 June 1858. [8]Maltbie D. Babcock, "This Is My Father's World," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). [9]Frederick Douglass (http://quotationsbook.com/quote/17251/; Internet, accessed 8 March 2010).